# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 19-03-2021 ಪ್ರಶ್ನೆ ಸಂಖ್ಯೆ : 1490 (1777)

0ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ. ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾ.ದ ದಿನಾಂಕ : 19-03-2021

ಉತ್ತರಿಸುವ ಸಚಿವರು: ಮಾನ್ಯ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ವಿಷಯ : ಬೆಲೆ ಅನುವರ್ತ ನಿಧಿ (Price Strabilization Fund) ಯಿಂದ ಯಾತನೆ ಮಾರಾಟ (Distress sale) ದಿಂದ ಪಾರು ಮಾಡುವಿಕೆ

(ಅ) ರಾಜ್ಯದ ಬಹುತೇಕ ರೈತರು ಬೆಳೆಯುವ ಆಲೂಗಡ್ಡೆ, ಟೊಮ್ಯಾಟೊ, ಈರುಳ್ಳಿ, ಬದನೆಕಾಯಿ ಮುಂತಾದ ಕಾಯಿಪಲ್ಯಗಳ ಬೆಳೆಗಳಿಂದ ಲಾಭದಾಯಕವಾಗಿಲ್ಲದ ವ್ಯವಸಾಯ ಆಗಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವುದಾದರೂ ಸಮೀಕ್ಷೆ ನಡೆಸಿವೆಯೇ ; (ವಿವರ ನೀಡುವುದು)

(ಆ) ಈ ಬೆಳೆಗಳಿಗೆ ದೊರೆಯುವ ಅತಿ ಕಡಿಮೆ ಬೆಲೆಯ ಸಮಸ್ಯೆ ಬಗ್ಗೆ ಸರ್ಕಾರ ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

(ಇ) ಕೇಂದ್ರ ರಾಜ್ಯ ಸರ್ಕಾರಗಳಿಂದ ಸ್ಥಾಪಿತವಾಗಿರುವ ಬೆಲೆ ಅನುವರ್ತ ನಿಧಿ (Price Strabilization Fund) ಯಿಂದ ಎಷ್ಟರಮಟ್ಟಿಗೆ ಯಾತನೆ ಮಾರಾಟ (Distress sale) ದಿಂದ ಪಾರು ಮಾಡಲು ಸಾಧ್ಯವಾಗಿದೆ ; (ವಿವರ ಒದಗಿಸುವುದು)

(ಈ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬೆಳೆಗಳನ್ನು ಬೆಳೆದು ಪದೇ ಪದೇ ತೊಂದರೆಗೊಳಗಾಗುವ ರೈತರಿಗೆ ಮಾರ್ಗೋಪಾಯಗಳನ್ನು ನೀಡಲು ಮತ್ತು ಯಾತನೆ ಮಾರಾಟದಿಂದ ಮುಕ್ತಿಗೊಳಿಸಲು ಶಾಶ್ವತ ಕೃಷಿ ಆಯೋಗವನ್ನು ಸ್ಥಾಪಿಸುವ ಉದ್ದೇಶವಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು)